2. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು :

ಕಾರ್ಯದರ್ಶಿ : ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ ಜಾನಪದ ವಿಶ್ವವಿದ್ಯಾಲಯ ವಿಧೇಯಕ 2011ನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

3. ವರದಿಯನ್ನೊಪ್ಪಿಸುವುದು :

ಶ್ರೀ ಡಿ.ಎನ್. ಜೀವರಾಜ್ (ಅಧ್ಯಕ್ಷರು, ಅಧೀನ ಶಾಸನ ರಚನಾ ಸಮಿತಿಯ ಪರವಾಗಿ) : ಮಾನ್ಯ ಅಧ್ಯಕ್ಷರೆ, 2010–11ನೇ ಸಾಲಿನ ಅಧೀನ ಶಾಸನ ರಚನಾ ಸಮಿತಿಯ 39ನೇ ವರದಿಯನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲ್ಪಾಯಿತು.

4. ವಿತ್ತೀಯ ಕಾರ್ಯಕಲಾಪ :

ಅಧ್ಯಕ್ಷರು : ಈಗ ವಿತ್ತೀಯ ಕಾರ್ಯಕಲಾಪ. 2011–12ನೇ ಸಾಲಿನ ಪೂರಕ ಅಂದಾಜುಗಳು (ಎರಡನೇ ಕಂತು) ಮೇಲೆ ಚರ್ಚೆ, ಉತ್ತರ ಹಾಗೂ ಮತಕ್ಕೆ ಹಾಕುವುದು.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 2011–12ನೇ ಸಾಲಿನ ಪೂರಕ ಅಂದಾಜುಗಳು ಒಟ್ಟು 3864.24 ಕೋಟಿ ರೂಪಾಯಿಗಳು. ಇದರಲ್ಲಿ ಕೇಂದ್ರ ಸರ್ಕಾರದ್ದು 660.10 ಕೋಟಿ ರೂಪಾಯಿಗಳು. ಇತರ ಜಮೆಗಳು 15 ಕೋಟಿ ರೂಪಾಯಿಗಳು ಮತ್ತು ಲೆಕ್ಕಹೊಂದಾಣಿಕೆಯಲ್ಲಿ 157.76 ಕೋಟಿ ರೂಪಾಯಿಗಳು. ಸಾಮಾನ್ಯ ರಾಜಸ್ವದಿಂದ ಹೊರಹೋಗುವಂತಹ ನಿವ್ವಳ ಮೊತ್ತ 3031.38 ಕೋಟಿ ರೂಪಾಯಿಗಳು ಮಾತ್ರ ಆಗಿರುತ್ತದೆ. ಅದರಲ್ಲಿ ಯಾವುದಕ್ಕೆಂದು ನಾವು ಬೇರೆ ಬೇರೆ ಪ್ರಮುಖ ಯೋಜನೆಗಳಿಗೆ ತೆಗೆದುಕೊಂಡಿದ್ದೇವೆಂದು ಹೇಳಿದ್ದೇವೆ. ಸಾಮಾಜಿಕ ಭದ್ರತಾ ಪಿಂಚಣಿಗಳು ಅದರಲ್ಲಿ ಸುಮಾರು 500 ಕೋಟಿ ರೂಪಾಯಿಗಳು. ಬೆಂಗಳೂರು ಮೆಟ್ರೋಗೆ 400 ಕೋಟಿ ರೂಪಾಯಿಗಳು, ಸುಂಕಗಳ ಮರುಪಾವತಿಗೆ ಮತ್ತು ಸಾಲಕ್ಕಾಗಿ 400 ಕೋಟಿ ರೂಪಾಯಿಗಳು, ಸರ್ಕಾರಿ ನೌಕರರ ಮಧ್ಯಂತರ ಪರಿಹಾರಕ್ಕಾಗಿ ಸುಮಾರು 376 ಕೋಟಿ ರೂಪಾಯಿಗಳು, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಗೆ (RKVY) ಅದಕ್ಕೆ